2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸೆಷನ್ಸ್ ಕೇಸು ನಂಃ 128/2017

| | | |
|---|---|---|
| ಸಾಕ್ಷಿದಾರರ ಹೆಸರು | - ಹರೀಶ ನಾಯ್ಕ | ಪಿಡಬ್ಲೂ -03 |
| ತಂದೆಯ ಹೆಸರು | - ಅಣ್ಣುನಾಯ್ಕ | ಸಿಡಬ್ಲೂ -07 |
| ವಯಸ್ಸು | - 38 ವರ್ಷ | |
| ಉದ್ಯೋಗ | - ಅಟೆಂಡರ್, ಫಾದರ್ ಮುಲ್ಲರ್ ಆಸ್ಪತ್ರೆ, ಮಂಗಳೂರು | |
| ವಾಸ ಸ್ಥಳ | - ಮಂಗಳೂರು | |

ದಿನಾಂಕಃ 08.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿಲ್ಲ. ಚಾಸಾ.1 ಗೊತ್ತಿಲ್ಲ. ಚಾಸಾ.8 ಮತ್ತು 9 ಗೊತ್ತು. ಅವರಿಬ್ಬರು ನನ್ನ ಜೊತೆಯಲ್ಲಿ ಫಾದರ್ ಮುಲ್ಲರ್ಸ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ.

2. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಮಹಜರನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ದಿಃ 01.06.2017 ರಂದು ಫಾದರ್ ಮುಲ್ಲರ್ಸ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ಕಿರಣ್ ಕುಮಾರ್ ಎಂಬ ರೋಗಿಯು ಚಾಕುವಿನಿಂದ ಹಲ್ಲೆ ಗೆ ಒಳಗಾದ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಹಲ್ಲೆಗೆ ಬಳಸಿದ ಚಾಕುವನ್ನು ನಮ್ಮ ಆಸ್ಪತ್ರೆಯ ವೈದ್ಯರು ಸೀಲು ಸಹಿ ಮಾಡಿ ನಮ್ಮ ಆಸ್ಪತ್ರೆಯ ಫೊರೆನ್ಸಿಕ್ ವಿಭಾಗದಲ್ಲಿ ಸಂಗ್ರಹಿಸಿಟ್ಟಿದ್ದರು. ಪೋಲೀಸರು ತನಿಖೆಗಾಗಿ ಸದರಿ ಚಾಕುವನ್ನು ಅಮಾನತು ಪಡಿಸಿಕೊಳ್ಳಲು ನಮ್ಮ ಆಸ್ಪತ್ರೆಗೆ ಬಂದಿದ್ದರು. ನಮ್ಮ

ಇಲಾಖೆಯ ಆದೇಶದ ಮೇರೆಗೆ ಫೊರೆನ್ಸಿಕ್ ವಿಭಾಗದಿಂದ ಸೀಲು ಮಾಡಿದ್ದ ಸದರಿ ಚಾಕುವನ್ನು ತಂದು ಪೋಲೀಸರಿಗೆ ನೀಡಿರುತ್ತೇನೆ. ಚಾಕುವನ್ನು ವಶಕ್ಕೆ ಪಡೆಯಲು ಸಾಕ್ಷಿ ಬೇಕೆಂದು ಹೇಳಿ ಚಾಸಾ.8 ಮತ್ತು 9 ರವರನ್ನು ಪೋಲೀಸರು ಕರೆಸಿದ್ದರು.

3. ನನ್ನ, ಚಾಸಾ.8 ಮತ್ತು 9 ರವರ ಸಮಕ್ಷಮ ಪೋಲೀಸರು ಸದರಿ ಚಾಕುವನ್ನು ನಿಪಿ.7 ರಂತೆ ಮಹಜರು ಮಾಡಿ ಅಮಾನತು ಪಡಿಸಿಕೊಂಡರು. ನಿಪಿ.7 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಭಾವಚಿತ್ರವನ್ನು ತೆಗೆದಿದ್ದು, ಸದರಿ ಭಾವಚಿತ್ರವನ್ನು ಈಗ ನೋಡುತ್ತಿದ್ದು ನಿಪಿ.8 ಎಂದು ಗುರುತಿಸಲಾಯಿತು. ನಿಪಿ.7 ಕ್ಕೆ ನಾನು, ಚಾಸಾ.8 ಮತ್ತು 9 ರವರು ಸಹಿ ಮಾಡಿರುತ್ತೇವೆ.

<u>ಪಾಟೀ ಸವಾಲುಃ ಶ್ರೀ ಬಿ.ಎಂ.ಎಲ್.ಜಿ., ವಕೀಲರಿಂದ ಆರೋಪಿ ಪರವಾಗಿ</u>

4. ಗಾಯಾಳು ಕಿರಣ್ ಕುಮಾರ್ ರವರನ್ನು ಕೊಲೆ ಯತ್ನದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ತಂದಿಲ್ಲ ಎಂದರೆ ಸರಿಯಲ್ಲ. ಕಿರಣ್ ಕುಮಾರ್ ರವರನ್ನು ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ತಂದಿರುತ್ತಾರೆ ಎಂದರೆ ಸರಿಯಲ್ಲ. ಚಾಕುವನ್ನು ಈ ದಿನವೇ ಮೊದಲನೆ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಪಿ.7 ರಲ್ಲಿ ಬರೆದ ವಿಚಾರವನ್ನು ಪೋಲಿಸರು ನನಗೆ ಓದಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ.7 ಕ್ಕೆ ನಾನು ಪೋಲೀಸರ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಮಾನತುಪಡಿಸಿಕೊಂಡು ಚಾಕುವಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಗುರುಪ್ರಸಾದ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ